ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org

ಸಂಖ್ಯೆ:ಕೆಆರ್ಐಡಿಎಲ್/ಆಡಳಿತ/ಅಧಿಕಾರಿಗಳ ಜೇಷ್ಠತಾ ಪಟ್ಟಿ/2018-19 ದಿನಾಂಕ 12-04-2018

## ಅಧಿಸೂಚನೆ

ವಿಷಯ: ಸಿವಿಲ್ ಅಪೀಲ್ ಸಂ.2368/2011- ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ- ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಿಂಪಡೆಯುವುದರ ಕುರಿತಂತೆ.

ಉಲ್ಲೇಖ:1) ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್ಆರ್ಆರ್ 2011 ಬೆಂಗಳೂರು ದಿನಾಂಕ 06-05-2017.

2) ಈ ಕಾರ್ಯಾಲಯದ ಅಧಿಸೂಚನೆ ಸಂ.ಕೆಆರ್ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 02-11-2017. (ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ)

3) ಈ ಕಾರ್ಯಾಲಯದ ಅಧಿಸೂಚನೆ ಸಂ.ಕೆಆರ್ಐಡಿಎಲ್/ಇಎಸ್ಟಿ/ಅ.ಅ./ಅಂತಿಮ ಜೇಷ್ಠತಾ ಪಟ್ಟಿ/2017-18/16498 ದಿನಾಂಕ 21-12-2017. (ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ)

4) ಈ ಕಾರ್ಯಾಲಯದ ಅಧಿಸೂಚನೆ ಸಂ.ಕೆಆರ್ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/ಎಇಇ ಗ್ರೇಡ್-1 & ಇಇ (ಸಿವಿಲ್)/2017-18 ದಿನಾಂಕ 28-12-2017. (ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ)

5) ಸಂಸ್ಥೆಯಲ್ಲಿನ ಸೇವಾ ನಿರತ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಮೇಲಿನ ವೃಂದದ ಅಧಿಕಾರಿಗಳಿಂದ ಬಂದಿರುವ ಆಕ್ಷೇಪಣೆಗಳು.

6) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಸುತ್ತೋಲೆ ಸಂ.ಮುಕಾ/500/2018 ದಿನಾಂಕ 13-04-2018.

** ** ** ** **

ಸಿವಿಲ್ ಅಪೀಲ್ ಸಂ.2368/2011 - ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 09-02-2017 ರಂದು ನೀಡಿದ ತೀರ್ಪಿನಲ್ಲಿ Karnataka Determination of Seniority of the Government Servants Promoted on the basis of Reservation (to the posts in the Civil Services of the State) Act, 2002ರ ಸೆಕ್ಷನ್ 3 ಮತ್ತು 4 ಅನ್ನು "Ultra vires Articles 14 and 16 of the Constitution" ಎಂದು ಆದೇಶಿಸಿರುತ್ತದೆ ಹಾಗೂ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ನಿರ್ದೇಶನ ನೀಡಿರುತ್ತದೆ:

ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಉಲ್ಲೇಖ-(1) ರ ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್ಆರ್ಆರ್ 2011 ಬೆಂಗಳೂರು ದಿನಾಂಕ 06-05-2017 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿಕೊಂಡು ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ 09-02-2017ರ ಆದೇಶದ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಿನಾಂಕ 06-05-2017ರ ಮಾರ್ಗಸೂಚಿಗಳನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-1) ವೃಂದಕ್ಕೆ ಪೂರಕ ವೃಂದವಾಗಿರುವ (Feeder Cadre) ಸಹಾಯಕ ಇಂಜಿನಿಯರ್ ಗ್ರೇಡ್-1 ವೃಂದದಲ್ಲಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಂ.ಕೆಆರ್ಐಡಿಎಲ್/ಇಎಸ್ಟಿ/ಸಅ-ಗ್ರೇಡ್-1/ಸಿಆರ್-34/2013-14 ದಿನಾಂಕ 26-10-2017ರ ಮೂಲಕ ಜಾರಿ ಮಾಡಿರುವ ಜೇಷ್ಠತೆಯನ್ನು ಪರಿಗಣಿಸಿ, ಅಧಿಸೂಚನೆ

......2

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org



ಸಂ.ಕೆಆರ್ಐಡಿಎಲ್/ ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 02-11-2017 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹಾಗೂ ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರುಗಳ ತಾತ್ಕಾಲಿಕ ಜೇಷ್ಠತಾ ಪ್ರಕಟಣೆ ಮಾಡಿ, 30 ದಿವಸಗಳೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿತ್ತು. ಸದರಿ ಅಧಿಸೂಚನೆ ಮೂಲಕ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡಲಾಗಿರುತ್ತದೆ.

ಸಂಸ್ಥೆಯಲ್ಲಿನ ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 & ಗ್ರೇಡ್-2, ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 21-12-2017 ಹಾಗೂ 28-12-2017ರ ಅಧಿಸೂಚನೆ ಮೂಲಕ ಪ್ರಕಟಣೆ ಮಾಡಿದ ಮೇಲೆಯೂ ಸಹ ಸಂಸ್ಥೆಯಲ್ಲಿನ ಹಲವಾರು ಸಹಾಯಕ ಅಭಿಯಂತರರು ಗ್ರೇಡ್-1, ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರುಗಳಿಂದ ಸಾಕಷ್ಟು ಆಕ್ಷೇಪಣೆಗಳು ಅಂತಿಮ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಈ ಕಾರ್ಯಾಲಯದಲ್ಲಿ ಸ್ವೀಕೃತಿಯಾಗಿರುತ್ತದೆ. ಈಗಾಗಲೇ ಸಂಸ್ಥೆಯ ವತಿಯಿಂದ ಪ್ರಕಟಿಸಲಾಗಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 & ಗ್ರೇಡ್-2, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರುಗಳ ಅಂತಿಮ ಜೇಷ್ಠತಾ ಪಟ್ಟಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಬಿ.ಕೆ.ಪವಿತ್ರ ಮತ್ತು ಇತರರ ಪ್ರಕರಣದ ತೀರ್ಪಿನ ತತ್ವಾಂಶಕ್ಕೆ ವ್ಯತಿರಿಕ್ತವಾದ ಆಕ್ಷೇಪಣೆಗಳು ಕಂಡುಬಂದಿರುವುದರಿಂದ, ಉಲ್ಲೇಖ-(3) ಮತ್ತು (4)ರ ಅಧಿಸೂಚನೆ ಮೂಲಕ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಿಂಪಡೆಯಲು ತೀರ್ಮಾನಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

Raj
13/Jan/2018

**(ಡಾ.ಆರ್.ರಾಜು, ಭಾ.ಅ.ಸೇ.,)**
**ವ್ಯವಸ್ಥಾಪಕ ನಿರ್ದೇಶಕರು**
**ಕೆಆರ್ಐಡಿಎಲ್, ಬೆಂಗಳೂರು.**

ಪ್ರತಿಯನ್ನು:

- ಮುಖ್ಯ ಅಭಿಯಂತರರು (ದಕ್ಷಿಣ/ ಉತ್ತರ/ ಕೇಂದ್ರೀಯ), ಕೆಆರ್ಐಡಿಎಲ್, ಬೆಂಗಳೂರು.
- ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಕೆಆರ್ಐಡಿಎಲ್.
- ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಕೆಆರ್ಐಡಿಎಲ್.
- ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಕೆಆರ್ಐಡಿಎಲ್.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಐಟಿ), ಕೆಆರ್ಐಡಿಎಲ್, ಕೇಂದ್ರ ಕಛೇರಿ- ಇವರು ಈ ಆಧಿಸೂಚನೆಯನ್ನು ಅನುಬಂಧದೊಂದಿಗೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಮಾಡಲು ಆದೇಶಿಸಿದೆ.